ಅಧ್ಯಕ್ಷರು : ಈಗ ಸಾಕಷ್ಟು ಚರ್ಚೆ ಆಗಿದೆ ಇದು ಇವತ್ತು introduce ಆಗಿದ್ದಲ್ಲ. ಪಾಸ್ ಮಾಡೋಣ. ಪರ್ಯಾಲೋಚನಾ ಪ್ರಸ್ತಾಪವನ್ನು ನಾನು ಈಗ ಸಭೆಯ ಮತಕ್ಕೆ ಹಾಕುತ್ತೇನೆ.

ಶ್ರೀ ಹೆಚ್.ಡಿ. ರೇವಣ್ಣ : ಮಾನ್ಯ ಸಭಾಧ್ಯಕ್ಷರೆ, ಒಂದು ದಿನ ಅಂದರೆ ಸೋಮವಾರದ ವರೆಗೆ ಬಿಲ್ ಮುಂದಕ್ಕೆ ಹಾಕಿದರೆ ದೇಶ ಮುಳುಗಿ ಹೋಗುತ್ತದೆಯೇ?

ಶ್ರೀ ಬಸವರಾಜ್ ಬೊಮ್ಮಾಯಿ : ಇದು ಡಿಸೆಂಬರ್ ನಲ್ಲಿಯೇ introduce ಆಗಿದೆ ಮತ್ತು ಇದರ ಮೇಲೆ ಸಾಕಷ್ಟು ಚರ್ಚೆಯೂ ಆಗಿದೆ. ಎಲ್ಲವೂ ಆಗಿದೆ, ಆ ಚರ್ಚೆಯಲ್ಲಿ ಬೇರೆ ಚರ್ಚೆಯೂ ಆಗಿದೆ. ನೀವು ಬಹಳಷ್ಟು ಸಮಯ ಕೂಡ ಕೊಟ್ಟಿದ್ದೀರಿ. ದೇವರ ವಿಷಯವಾಗಿರುವುದರಿಂದ ದಯವಿಟ್ಟು ಪರ್ಯಾಲೋಚಿಸಬೇಕೆಂದು ಕೇಳಿಕೊಳ್ಳುತ್ತೇನೆ, ಮಾನ್ಯ ಸಭಾಧ್ಯಕ್ಷರೆ.

(ಮಾನ್ಯ ಹೆಚ್.ಡಿ. ರೇವಣ್ಣನವರ ನೇತೃತ್ವದಲ್ಲಿ ಜೆ.ಡಿ.(ಎಸ್) ಸದಸ್ಯರುಗಳು ಸಭಾ ತ್ಯಾಗ ಮಾಡಿದರು)

ಅಧ್ಯಕ್ಷರು : ಸಾಕಷ್ಟು ಚರ್ಚೆಯಾಗಿದೆ, ಪಾಸ್ ಮಾಡೋಣ.

ಅಧ್ಯಕ್ಷರು: ಪರ್ಯಾಲೋಚನಾ ಪ್ರಸ್ತಾವವನ್ನು ಈಗ ಸಭೆಯ ಮತಕ್ಕೆ ಹಾಕುತ್ತೇನೆ.

ಕರ್ನಾಟಕ ವಿಧಾನ ಪರಿಷತ್ತಿನಿಂದ ಪುನರ್ ಅಂಗೀಕೃತವಾದ ರೂಪದಲ್ಲಿರುವ 2011ನೇ ಸಾಲಿನ ಕರ್ನಾಟಕ ಹಿಂದೂ ಧಾರ್ಮಿಕ ಸಂಸ್ಥೆಗಳು ಮತ್ತು ಧರ್ಮಾದಾಯ ದತ್ತಿಗಳ (ಎರಡನೇ ತಿದ್ದುಪಡಿ) ವಿಧೇಯಕವನ್ನು

ಸಭೆಯು ಪುನರ್ ಪರ್ಯಾಲೋಚಿಸುತ್ತದೆ ಎಂಬ ವಿಷಯ ಸಭೆಯ ಮುಂದೆ ಇದೆ.

ಪ್ರಸ್ತಾವದ ಪರವಾಗಿರುವವರು "ಹೌದು" ಎಂದು ಸೂಚಿಸಬೇಕು

ಪ್ರಸ್ತಾವದ ವಿರೋಧವಾಗಿರುವವರು "ಇಲ್ಲ" ಎಂದು ಸೂಚಿಸಬೇಕು

ಪ್ರಸ್ತಾವವು "ಹೌದು" ಎನ್ನುವವರ ಪರವಾಗಿದೆ ಎಂದು ಭಾವಿಸುತ್ತೇನೆ

ಪ್ರಸ್ತಾವವು "ಹೌದು" ಎನ್ನುವವರ ಪರವಾಗಿದೆ